ಅವರೊಟ್ಟಿಗೆ ಅವರ ಕಸುಬನ್ನೇ ಮಾಡಿಕೊಂಡು ಅವರಂತೆಯೇ ಇದ್ದುಬಿಡುತ್ತಿದ್ದ. ಹಾಗೆ ಅನೇಕ ಸಾರಿ ಕ್ಯಾಂಪು ಮಾಡಿದಾಗ ಕುಡಿದು ಅನೇಕ ಹೆಂಗಸರ ಸಹವಾಸ ಮಾಡಿ ಖುಷಿಯಾಗಿರುತ್ತಿದ್ದ. ಒಮ್ಮೆ ಆಂಧ್ರದ ಗಂಡ ಸತ್ತ ಹರೆಯದ ದೊಂಬಿದಾಸರ ಹೆಣ್ಣಿನ ಜೊತೆ ಎರಡು ವರ್ಷ ಮದನಪಲ್ಲಿಯಲ್ಲಿ ಸಂಸಾರ ಹೂಡಿದ್ದ. ಆಕೆ ಬುಡೇನ್ ಸಾಬಿಗೆ ಕುಡಿಯುವುದನ್ನೂ ಕಲಿಸಿದ್ದಳು. ಅಕ್ಕಿರಾಂಪುರಕ್ಕೂ ಅವಳನ್ನು ಒಮ್ಮೆ ಕರೆದುಕೊಂಡು ಬಂದು ಎರಡು ತಿಂಗಳು ಇರಿಸಿಕೊಂಡು ಕಡೆಗೆ ತಿರುಪತಿಗೆ ಹೋಗಿದ್ದ. ಆ ಹೆಂಗಸು ಇವನಿಗೂ ಕೈಕೊಟ್ಟು ಇನ್ಯಾರದೋ ಜೊತೆ ಹೋಗಿಬಿಟ್ಟಿದ್ದಳು. ಅವಳನ್ನು ಮಾಣಿಕ್ಯದಂತೆ ನೋಡಿಕೊಳ್ಳುತ್ತಿದ್ದ ಬುಡೇನ್ ಸಾಬನಿಗೆ ಶಾಕ್ ಆಗಿತ್ತು. ಒಂದು ತಿಂಗಳ ಕಾಲ ಅವಳಿಗಾಗಿ ಹುಡುಕಿ, ಹುಡುಕಿ ಸೋತು ಸುಮ್ಮನಾಗಿದ್ದ. ಈಗಾಗಲೇ ತನ್ನ ಅಲೆಮಾರಿ ಜರ್ನಿಯಲ್ಲಿ ಅನೇಕ ಹೆಣ್ಣುಗಳ ಸಹವಾಸವನ್ನು ಮಾಡಿದ್ದ ಬುಡೇನ್ ಸಾಬನಿಗೆ ಅವೊತ್ತಿನಿಂದ ಯಾವ ಹೆಣ್ಣನ್ನೂ ನಂಬಬಾರದು ಅನ್ನಿಸಿತ್ತಲ್ಲದೆ, ಗಂಡಸರು ಕೂಡ ನಂಬಿಕೆಗೆ ಅನರ್ಹರೆಂಬ ಸತ್ಯವನ್ನು ತನ್ನ ಅನುಭವದಿಂದಲೇ ಕಂಡುಕೊಂಡಿದ್ದ. ಈ ಜಗವೇ ಒಂದು ನಾಟಕರಂಗ ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಂಡು ನಗುತ್ತಿದ್ದ. ಅವನಿಗೆ ಹೊಲಸು ಸುಳಿ ಇದೆಯೆಂದೂ, ಹಾಗಾಗಿ ಹೆಣ್ಣುಗಳು ಅವನಿಗೆ ಬೇಗ ಒಲಿಯುತ್ತಾರೆಂದು ಸ್ವತಃ ಗೆಳೆಯ ಅತಾವುಲ್ಲಾನೇ ಊರಲ್ಲಿ ಹೇಳಿಕೊಂಡು ತಿರುಗಿದ್ದ. ಹೀಗೆ ಕಾಲ ಚಕ್ರದೊಂದಿಗೆ ಬುಡೇನ್ ಸಾಬಿಯೂ ತಿರುಗುತ್ತಾ ತಿರುಗುತ್ತಾ...



## ಉತ್ತರಾರ್ಧ:

ಇಂಥಾನಿಂತು ಬುಡೇನ್ ಸಾಬನಿಗೆ ವಯಸ್ಸು ಐವತ್ತೈದು ತುಂಬಿ ಐವತ್ತಾರರಲ್ಲಿ ನಡೆಯುತ್ತಿತ್ತು. ಈ ಮೂರು ತಿಂಗಳಿಂದ ತುಂಬಾ ಸುಸ್ತಾಗತೊಡಗಿತ್ತಲ್ಲದೆ ಆಗಾಗ ಜ್ವರ ಬಂದು ಕೈಕಾಲಿನ ಕೀಲುಗಳೆಲ್ಲ ನೋವಿನಿಂದ ಹಿಡಿದುಕೊಂಡಂತಾಗುತ್ತಿದ್ದವು. ಜೊತೆಗೆ ಒಂದೊಂದು ಸಾರಿ ಕರುಳು ಬಾಯಿಗೆ ಬರುವ ಹಾಗೆ ಕೆಮ್ಮು ಬರುತ್ತಿತ್ತು. ಊಟ ಕೂಡ ಸರಿಯಾಗಿ ಸೇರುತ್ತಿರಲಿಲ್ಲ. ಹಾಗಾಗಿ ರಾಂಪುರವನ್ನು ಬಿಟ್ಟು ಕದಲಿರಲಿಲ್ಲ. ಗಟ್ಟಿಯಾಗಿದ್ದಾಗ ಸೀಮೆ ಸೀಮೆಗಳನ್ನು ಸುಲಭವಾಗಿ ಅಲೆದಾಡಿಕೊಂಡಿದ್ದ ಬುಡೇನ್ ಸಾಬಿಯು ಹೀಗೆ ಇದ್ದಕ್ಕಿದ್ದಂತೆ ಮೂಲೆಗೆ ಬಿದ್ದಿದ್ದು ಬೇರೆಯವರಿಗಿರಲಿ ಸ್ವತಃ ಬುಡೇನ್ ಸಾಬಿಗೇ ಆಶ್ಚರ್ಯವಾಗಿತ್ತು. ಯಥಾಪ್ರಕಾರ ಬಾಲ್ಯ ಮಿತ್ರನಾದ ಅತಾವುಲ್ಲಾನು ಮನೆಯಿಂದ ಊಟ ತಂದಿಡುತ್ತಿದ್ದವನು ಒಂದು ದಿನ ಸಾಯಂಕಾಲ ಡಾಕ್ಟರ್ ವಸಂತಕುಮಾರ್ ಭಟ್ಟರ ಶಾಪಿಗೆ ಕರೆದುಕೊಂಡು ಹೋಗಿದ್ದ. ಡಾಕ್ಟರ್ ಭಟ್ಟರು ಬುಡೇನ್ ಸಾಬಿಯ ಎದೆ ಮತ್ತು ಬೆನ್ನಿನ ಮೇಲೇ ಸ್ಟೆತೋಸ್ಕೊಪ್ ಆಡಿಸುತ್ತಾ ''ಈ ಊರಲ್ಲಿ ನಾನು ಶಾಪು ಸ್ಟಾರ್ಟ್ ಮಾಡಿ ನಲವತ್ತು ವರ್ಷಗಳಾದ್ವು, ಇವರನ್ನ ಒಂದ್ಸಾರಿನೂ ನೋಡಿಲ್ವಲ್ಲ...'' ಎಂದು ಅಚ್ಚರಿ ವ್ಯಕ್ತಪಡಿಸಿದ್ದರು. ಅತಾವುಲ್ಲಾನು ಒಂದೆರಡು ಮಾತುಗಳಲ್ಲಿ ಬುಡೇನ್ ಸಾಬಿಯ ಬಗ್ಗೆ ಹಿಂಗಲ್ಲಾ ಹಿಂಗೆಂದು ಹೇಳಿದ್ದ. ಡಾಕ್ಟರ್ ಭಟ್ಟರು ಅತಾವುಲ್ಲಾನ ಕಡೆ ಚಿಂತೆಯಿಂದೆಂಬಂತೆ ನೋಡುತ್ತಾ ''ನೋಡಿ ಸಾಹೇಬರೆ,